**HRC** 2/2025

**ಆರ್.ಡಬ್ಲ್ಯೂ-1**

**ದಿಃ 12-03-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ MGK ವಕೀಲರಿಂದ**

ನಾನು ಸಿವಿಲ್ ಕಾಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತೇನೆ. ನಾನು ಆ ರೀತಿಯಾಗಿ ಡಿಫೆನ್ಸ್ ಸಂಸ್ಥೆಗೆ ಸಂಬಂಧಪಟ್ಟಂತೆ ಕಾಂಟ್ರಾಕ್ಟ್ ಕೆಲಸವನ್ನು ಮಾಡುತ್ತೇನೆ. ನಾನು ಕಟ್ಟಡಗಳ maintenance ಕೆಲಸವನ್ನು ಮಾಡುತ್ತೇನೆ. ಆ ರೀತಿಯಾಗಿ ಹಳೆ ವಸ್ತುಗಳನ್ನು ಸ್ವಚ್ಛಗೊಳಿಸಿ ಹೊಸತನ್ನು ಹಾಕಿಕೊಡುವ ಕೆಲಸವನ್ನು ಮಾಡುತ್ತೇನೆ ಎಂದರೆ ಸರಿ. ನಾನು ಹಳೆ ಬಾಗಿಲುಗಳನ್ನು ಹಾಗೂ ಹಳೆಯ ನೆಲವನ್ನು ತೆಗೆದು ಏನು ಮಾಡುತ್ತೇನೆ ಎಂದರೆ ಸಾಕ್ಷಿಯು ಅದನ್ನು ಗುಜರಿಗೆ ಕೊಡುತ್ತೇವೆ ಎಂದು ನುಡಿಯುತ್ತಾರೆ. ಈ ಅರ್ಜಿಯಲ್ಲಿ ಹೇಳಿರುವ ಸ್ವತ್ತು ಡಿಫೆನ್ಸ್ ಕಂಟೋನ್‌ಮೆಂಟ್ ಪ್ರದೇಶಗಳಲ್ಲಿ ಬರುತ್ತದೆ ಎಂದರೆ ಸರಿ.

2. ನಿಪಿಃ1 ರಲ್ಲಿ ಆಗಿರುವ ಕರಾರಿನಂತೆ ನನ್ನ ಹಾಗೂ ಅರ್ಜಿದಾರರ ನಡುವಲ್ಲಿ ಅರ್ಜಿಯಲ್ಲಿ ಹೇಳಿರುವ ಸ್ವತ್ತನ್ನು ಬಾಡಿಗೆಗೆ ನೀಡಲಾಗಿತ್ತು ಎಂದರೆ ಸರಿ. ಸದರಿ ನಿಪಿಃ1 ದಿಃ01.09.2023 ರಿಂದ ದಿಃ31.07.2024, 11 ತಿಂಗಳಿನ ಅವಧಿಗೆ ಒಪ್ಪಲಾಗಿತ್ತು ಎಂದರೆ ಸರಿ. ಸದರಿ ನಿಪಿಃ1 ರಂತೆ ತಿಂಗಳಿಗೆ ರೂ.1,500/- ಬಾಡಿಗೆ ಹಾಗೂ ರೂ.10,000/- ಭದ್ರತೆ ಹಣವನ್ನು ನೀಡಲಾಗಿತ್ತು ಎಂದರೆ ಸರಿ. ನಿಪಿಃ1 ರಂತೆ ಬಾಡಿಗೆಯನ್ನು ಪ್ರತಿ ತಿಂಗಳ 5ನೇ ದಿನದೊಳಗೆ ಕೊಡಬೇಕೆಂದು ಆಗಿತ್ತು ಎಂದರೆ ಸರಿ. ನಿಪಿಃ1 ರಲ್ಲಿ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ನೀರಿನ ಹಾಗೂ ವಿದ್ಯುತ್ ಬಿಲ್ಲಗಳನ್ನು ನಾನು ಕಟ್ಟಬೇಕೆಂದು ಹಾಗೂ ತೆರಿಗೆಯನ್ನು ಅರ್ಜಿದಾರರು ಕಟ್ಟಬೇಕೆಂದು ಕರಾರು ಆಗಿತ್ತು ಎಂದರೆ ಸರಿ. ನಿಪಿಃ1 ರಲ್ಲಿ 11 ತಿಂಗಳ ನಂತರ ಸದರಿ ಬಾಡಿಗೆ ಕರಾರು ನವೀಕರಣಗೊಳಿಸದಿದ್ದರೆ ನಾನು ಸದರಿ ಸ್ವತ್ತನ್ನು ಬಿಟ್ಟುಕೊಡಬೇಕೆಂದು ನಮೂದು

ಇರುತ್ತದೆ ಎಂದರೆ ಸರಿ. ಅದೇ ರೀತಿಯಾಗಿ ನಿಪಿಃ1 ರಲ್ಲಿ ನಾನು ಸದರಿ 11 ತಿಂಗಳು ಅವಧಿ ಮುಗಿದ ನಂತರ ಅರ್ಜಿಯ ಸ್ವತ್ತಿನಲ್ಲಿ ಬಾಡಿಗೆದಾರರಾಗಿ ಮುಂದುವರೆಸಬೇಕಾದರೆ, ಬಾಡಿಗೆ ಕರಾರನ್ನು ಒಂದೇ ನವೀಕರಣಗೊಳಿಸಬೇಕು ಇಲ್ಲದಿದ್ದರೆ ಸದರಿ ಸ್ವತ್ತಿನ ಸ್ವಾಧೀನವನ್ನು ಅರ್ಜಿದಾರರರಿಗೆ ಬಿಟ್ಟುಕೊಡಬೇಕೆಂದು ಬರೆಯಲಾಗಿರುತ್ತದೆ ಎಂದರೆ ಸರಿ. ನಾನು ಸದರಿ ಅರ್ಜಿಯ ಸ್ವತ್ತಿನಲ್ಲಿ ಬಾಡಿಗೆದಾರರಾಗಿ ಮುಂದುವರೆಸುತ್ತೇನೆ ಎಂದು ಯಾವುದೇ ಲಿಖಿತ ನೋಟೀಸನ್ನು ಅರ್ಜಿದಾರರರಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಮೌಖಿಕವಾಗಿ ಅರ್ಜಿದಾರರಿಗೆ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ದಿಃ31.07.2024 ರ ನಂತರ ನನ್ನ ಹಾಗೂ ಅರ್ಜಿದಾರರ ನಡುವೆ ಯಾವುದೇ ನವೀಕರಣಗೊಳಿಸಿದ ಹೊಸ ಬಾಡಿಗೆ ಕರಾರು ಆಗಿರುವುದಿಲ್ಲ ಎಂದರೆ ಸರಿ. ನಾನು ಅರ್ಜಿದಾರರಿಗೆ ಅರ್ಜಿಯ ಸ್ವತ್ತನ್ನು ಕರಾರಿನಂತೆ 11 ತಿಂಗಳ ನಂತರ ಬಿಟ್ಟುಕೊಡುತ್ತೇನೆ ಎಂದು ಹೇಳಿದ ಕಾರಣ, ಆ ರೀತಿಯಾಗಿ ಯಾವುದೇ ಹೊಸ ಕರಾರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಿಃ31.07.2024 ರ ಮೊದಲು ಸುಮಾರು ಜುಲೈ 2024 ರ ಮೊದಲನೇ-ಎರಡನೇ ವಾರದಲ್ಲಿ, ಬಾಡಿಗೆ ಕರಾರಿನಂತೆ 11 ತಿಂಗಳುಗಳ ಅವಧಿ ಮುಗಿತಾ ಬರುವುದರಿಂದ, ಅರ್ಜಿದಾರರು ನನಗೆ ಅರ್ಜಿಯ ಸ್ವತ್ತನ್ನು ಬಿಟ್ಟುಕೊಡಲು ವಿನಂತಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನೇ ಖುದ್ದಾಗಿ ಸದರಿ ಅರ್ಜಿಯ ಆಸ್ತಿಯಲ್ಲಿ ಮುಂದುವರೆಸಲು, ಜಿ.ಎಸ್.ಟಿ ಹಾಗೂ ವ್ಯವಹಾರಕ್ಕೆ ಸಂಬಂಧಿಸಿದಂತೆ ಕೆಲವೊಂದು ಕ್ರಮಗಳನ್ನು ತೆಗೆದುಕೊಳ್ಳುವ ಉದ್ದೇಶದಿಂದ, ಇನ್ನು ಸ್ವಲ್ಪ ಸಮಯಾವಕಾಶ ಬೇಕಾಗುತ್ತದೆ ಎಂದು ಅರ್ಜಿದಾರರ ಬಳಿ ಕೇಳಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆ ರೀತಿಯಾಗಿ ಯಾವತ್ತೂ ಲಿಖಿತವಾಗಿ ಅರ್ಜಿದಾರರ ಬಳಿ ಕಾಲಾವಕಾಶ ಕೇಳಿಕೊಂಡಿರುವುದಿಲ್ಲ ಎಂದರೆ ಸರಿ.

3. ನಾನು ಬಾಡಿಗೆದಾರರಾಗಿ ವಾಸವಿರುವ ಮನೆ ಔಟ್ ಹೌಸ್ ಆಗಿರುತ್ತದೆ ಎಂದರೆ ಸರಿ. ನಾನು ಸದರಿ ಅರ್ಜಿಯ ಸ್ವತ್ತನ್ನು ಬಾಡಿಗೆಗೆ ತೆಗೆದುಕೊಳ್ಳುವ ಸಮಯದಲ್ಲಿ ಅದು ಸುಸ್ಥಿತಿಯಲ್ಲಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದು ದುರಸ್ಥಿತಿಯಲ್ಲಿದ್ದು ನಾನು ಅದನ್ನು ರಿಪೇರಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳಿರುವಂತೆ ಸದರಿ ಅರ್ಜಿಯ ಸ್ವತ್ತು ಸುಸ್ಥಿತಿಯಲ್ಲಿ ಇರಲಿಲ್ಲ ನಾನು ಅದನ್ನು ನನ್ನ ಖರ್ಚಿನಿಂದ ಸರಿ ಪಡಿಸಿರುತ್ತೇನೆ ಎಂಬುದರ ಬಗ್ಗೆ ನಿಪಿಃ1 ರಲ್ಲಿ ಉಲ್ಲೇಖ ಇರುವುದಿಲ್ಲ ಎಂದರೆ ಸರಿ. ನನಗೆ ನಿಪಿಃ1 ರಲ್ಲಿ ಸದರಿ ಅರ್ಜಿಯ ಸ್ವತ್ತನ್ನು ರಿಪೇರಿ ಮಾಡಲು ಯಾವುದೇ ಪರವಾನಿಗೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಅರ್ಜಿದಾರರು ಮೌಖಿಕವಾಗಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

4. ಅರ್ಜಿದಾರರು ವಿಧವೆಯಾಗಿದ್ದು, ಮನೆಯಲ್ಲಿ ಒಬ್ಬರೇ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರ ಮನೆಯಲ್ಲಿ ಯಾರು ಇರುತ್ತಾರೆ ಎಂದರೆ, ನನಗೆ ಅರ್ಜಿದಾರರು ಅರ್ಜಿಯ ಸ್ವತ್ತನ್ನು ಬಾಡಿಗೆಗೆ ಕೊಡುವ ಸಮಯದಲ್ಲಿ ಅರ್ಜಿದಾರರು ಒಬ್ಬರೇ ತಮ್ಮ ಮನೆಯಲ್ಲಿ ವಾಸವಿದ್ದರು ಎಂದು ನುಡಿಯುತ್ತಾರೆ. ನಾನು ಕಾಂಟ್ರಾಕ್ಟ್ ಕೆಲಸ ಮಾಡುತ್ತಿದ್ದರಿಂದ ನಾನು ನನ್ನ ಕೆಲಸದ ವಸ್ತುಗಳನ್ನು ತಂದು, ಅರ್ಜಿದಾರರ ಅನುಮತಿ ಇಲ್ಲದೇ ಅರ್ಜಿಯ ಸ್ವತ್ತನ್ನು ರಿಪೇರಿ ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಅರ್ಜಿದಾರರೇ ಮೌಖಿಕವಾಗಿ ತಿಳಿಸಿದ್ದರಿಂದ ನಾನು ಆ ರೀತಿಯಾಗಿ ಅವರ ಸಮಕ್ಷಮ ಸದರಿ ಕೆಲಸವನ್ನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸದರಿ ಅರ್ಜಿಯ ಸ್ವತ್ತನ್ನು ರಿಪೇರಿ ಮಾಡಲು ರೂ.1,75,000/- ನ್ನು ಖರ್ಚು ಮಾಡಿರುತ್ತೇನೆ ಎಂದು ಹೇಳಿದ್ದು, ನಾನು ಸದರಿ ರಿಪೇರಿಯನ್ನು ಮಾಡಲು ಅರ್ಜಿದಾರರಿಂದ ಅನುಮತಿಯನ್ನು ಪಡೆದಿರುವುದಿಲ್ಲ ಎಂದರೆ ಸಾಕ್ಷಿಯು ಪುನಃ ನಾನು ಅರ್ಜಿದಾರರ ನಿರ್ದೇಶನದಂತೆ ಸದರಿ ರಿಪೇರಿಯ ಕೆಲಸವನ್ನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

5. ನಾನು ಅರ್ಜಿದಾರರಿಗೆ ಬಾಡಿಗೆ ಹಣವನ್ನು ನಗದು ರೂಪದಲ್ಲಿ ಕೊಡುತ್ತಿದ್ದೆ. ನನ್ನ ಬಳಿ ಸದರಿ ಬಾಡಿಗೆ ಕೊಟ್ಟಿರುವ ಬಗ್ಗೆ ರಶೀದಿಗಳು ಇವೆಯೇ ಎಂದರೆ ಸಾಕ್ಷಿಯು ನನಗೆ ಅರ್ಜಿದಾರರು ಯಾವುದೇ ರಶೀದಿಗಳನ್ನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಬಾಡಿಗೆ ರಶೀದಿಗಳನ್ನು ಅರ್ಜಿದಾರರ ಬಳಿ ಕೇಳಿರುತ್ತೇನೆ. ಆ ರೀತಿಯಾಗಿ ಅರ್ಜಿದಾರರು ನನಗೆ ಬಾಡಿಗೆ ರಶೀದಿಗಳನ್ನು ನೀಡದಿದ್ದ ಸಮಯದಲ್ಲಿ, ನಾನು ಸಂಬಂಧಪಟ್ಟ ನ್ಯಾಯಾಲಯದ ಮುಂದೆ ಬಾಡಿಗೆ ಹಣವನ್ನು ಜಮಾ ಮಾಡಲು ಯಾವುದೇ ಅರ್ಜಿಯನ್ನು ಕೊಟ್ಟಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಅರ್ಜಿದಾರರಿಗೆ Money Order ಮೂಲಕ ಹಣವನ್ನು ಕೊಟ್ಟಿರುತ್ತೇನೆ, ಸದರಿಯವರು ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಅರ್ಜಿದಾರರು Money Order ನ್ನು ಪಡೆಯದಿದ್ದಲ್ಲಿ ನಾನು ಸಂಬಂಧಪಟ್ಟ ನ್ಯಾಯಾಲಯಕ್ಕೆ ಯಾವುದೇ ಅರ್ಜಿಯನ್ನು ಹಾಕಿ ಬಾಡಿಗೆಯನ್ನು ಜಮಾ ಮಾಡುವ ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ. ನನಗೆ ಅರ್ಜಿದಾರರು ಒಂದು ತಿಂಗಳ ಬಾಡಿಗೆಯ ರಶೀದಿಯನ್ನಷ್ಟೇ ಕೊಟ್ಟಿರುತ್ತಾರೆ. ಅದು ಬಾಡಿಗೆ ಕರಾರು ಆದ ನಂತರ ಮೊದಲನೆ ಬಾಡಿಗೆಗೆ ಸಂಬಂಧಿಸಿರುತ್ತದೆ. ಸದರಿ ರಶೀದಿಯನ್ನು ನಾನು ಈ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವುದಿಲ್ಲ. ನಾನು ಬಾಡಿಗೆಯನ್ನು ಜಮಾ ಮಾಡಲು ಈ ಅರ್ಜಿಯಲ್ಲಿ ಯಾವುದೇ ಮಧ್ಯಂತರ ಅರ್ಜಿಯನ್ನು ಹಾಕಿರುವುದಿಲ್ಲ ಎಂದರೆ ಸರಿ. ನನಗೆ ಈ ಅರ್ಜಿಯನ್ನು ದಾಖಲಿಸುವ ಪೂರ್ವದಲ್ಲಿ ಅರ್ಜಿದಾರರು ನೋಟೀಸನ್ನು ಕೊಟ್ಟಿದ್ದರು ಎಂದರೆ ಸರಿ. ಸದರಿ ನೋಟೀಸನ್ನು ಅರ್ಜಿದಾರರು ದಿಃ08.10.2024 ರಂದು ನನಗೆ ಕಳುಹಿಸಿದ್ದು, ನಾನು ಅದನ್ನು ದಿಃ09.10.2024 ರಂದು ಪಡೆದಿರುತ್ತೇನೆ ಎಂದರೆ ಸರಿ. ನಾನು ಅರ್ಜಿದಾರರಿಗೆ ಆಸ್ತಿಯ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಬಾಡಿಗೆಯನ್ನು ಈವರೆಗೂ ಕೊಟ್ಟಿರುವುದಿಲ್ಲ ಹಾಗೂ

Money Order ಮೂಲಕ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಾನು ನನ್ನ ಸಾಕ್ಷ್ಯ ವಿಚಾರಣೆಯಲ್ಲಿ ಅರ್ಜಿಯ ಸ್ವತ್ತಿಗೆ ಸಂಬಂಧಿಸಿ ಜಿ ಎಲ್ ಆರ್ ಎಕ್ಸಟ್ರಾಕ್ಟನ್ನು ಪಡೆದಿರುತ್ತೇನೆ ಎಂದು ಹೇಳಿದ್ದು, ಸದರಿ ದಾಖಲೆಯ ಪ್ರಕಾರ ಅರ್ಜಿ ಸ್ವತ್ತಿನ ಮಾಲೀಕರು ಯಾರು ಇರುತ್ತಾರೆ ಎಂದರೆ ಸಾಕ್ಷಿಯು ನಾನು ಎಷ್ಟು ಜನ ಮಾಲೀಕರು ಇರುತ್ತಾರೆ ಎಂದು ನೋಡಿರುವುದಿಲ್ಲ, ಅರ್ಜಿದಾರರು ನಾನೇ ಮಾಲೀಕರಾಗಿರುತ್ತೇನೆ ಎಂದು ನನಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಿ ಎಲ್ ಆರ್ ಎಕ್ಸಟ್ರಾಕ್ಟ ನಲ್ಲಿ ಅರ್ಜಿದಾರರ ಸಹೋದರ ಸಹೋದರಿಯರು ಸಹ ಮಾಲೀಕರಾಗಿ ಇರುತ್ತಾರೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಅರ್ಜಿದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಅರ್ಜಿಯ ಸ್ವತ್ತಿನಲ್ಲಿ ಬಾಡಿಗೆಯನ್ನು ಕೊಡದೇ ಮುಂದುವರೆಸುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಈ ಸುಮಾರು 74-75 ವರ್ಷಗಳು ಎಂದರ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಾನು ಅರ್ಜಿಯ ಸ್ವತ್ತನ್ನು ರಿಪೇರಿ ಮಾಡಲು ರೂ.1,75,000/- ಹಣವನ್ನು ಖರ್ಚು ಮಾಡಿದ್ದು, ನಾನು ಅದನ್ನು ಅರ್ಜಿದಾರರಿಂದ ಹಿಂಪಡೆಯಲು ಯಾವುದೇ ಹಣ ಮರುಪಾವತಿಗೆ ದಾವೆಯನ್ನು ಹಾಕಿರುವುದಿಲ್ಲ ಎಂದರೆ ಸರಿ. ನಿಪಿಃ2 ನೋಟೀಸನ್ನು ಅರ್ಜಿದಾರರು ನನಗೆ ಕೊಡುವ ಮೊದಲು ನಾನು ಸದರಿ ರೂ.1,75,000/- ನ್ನು ಕೋರಿ ಅರ್ಜಿದಾರರಿಗೆ ಯಾವುದೇ ಲೀಗಲ್ ನೋಟೀಸನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ಅರ್ಜಿ ಸ್ವತ್ತನ್ನು ರಿಪೇರಿ ಮಾಡಲು ರೂ.1,75,000/- ಹಣವನ್ನು ಖರ್ಚು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿಯ ಸ್ವತ್ತು ಯಾವತ್ತೂ ದುರಸ್ಥಿಯಲ್ಲಿ ಇರಲಿಲ್ಲ, ನಾನೇ ಖುದ್ದಾಗಿ ಅರ್ಜಿದಾರರ ಅನುಮತಿ

**HRC** 2/2025

**ಆರ್.ಡಬ್ಲ್ಯೂ-1**

ಇಲ್ಲದೇ ಅದನ್ನು ನನ್ನ ಕಾಂಟ್ರಾಕ್ಟ್ ಗೆ ಸಂಬಂಧಿಸಿದ ಕೆಲಸದ ವಸ್ತುಗಳಿಂದ ನವೀಕರಣಗೊಳಿಸಿರುತ್ತೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿ ಇದೆ.**

**Sd/-**

**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**